# ಗಾಂಧೀಜೀ–ಕಲೆ

ಗಾಂಧೀಜಿ ಮೈಸೂರಿನಲ್ಲಿ ಆರೋಗ್ಯಕ್ಕಾಗಿ ಕೆಲಕಾಲ ತಂಗಿದ್ದರು. ಗುಣವಾದ ಮೇಲೆ ಮೈಸೂರನ್ನೆಲ್ಲ ಸುತ್ತಿದರು. ಪ್ರಭುತ್ವವೇ ಅವರ ಸೇವೆಗೆ ನಿಂತಿತ್ತು. ಮೈಸೂರಲ್ಲಿ ಮಲೆನಾಡು ಅಂದವಾದ ಸೀಮೆ. ಅದರಲ್ಲಿ ಗೇರುಸೊಪ್ಪೆಯ ಜಲಪಾತವಂತೂ ಅತಿ ರಮಣೀಯವಾದುದು. ಅದರ ಚೆಲುವು ಜಗತ್ತಿಗೆ ಒಂದು ಸೆಳೆತವಾಗಿದೆ. ಹಿಂದುಸ್ತಾನಕ್ಕೆ ಬಂದ ಪ್ರವಾಸಿಗಳು ಜೋಗವನ್ನು ನೋಡದೆ ಹಿಂದಿರುಗುವುದಿಲ್ಲ. ಗಾಂಧೀಜಿ ಸಾಗರಕ್ಕೆ ಹೋದರು. ಅಲ್ಲಿಂದ ಗೇರುಸೊಪ್ಪೆ ಆರೇ ಹರದಾರಿ, ಮೋಟಾರಿನಿಂದ ಅದೊಂದು ದೂರವೇ ಅಲ್ಲ. ಆದರೂ ಗಾಂಧೀಜಿ ಸಾಗರದಿಂದ ತೀರ್ಥಹಳ್ಳಿಗೆ ನೇರಾಗಿ ನಡೆದುಬಿಟ್ಟರು. ಗೇರುಸೊಪ್ಪೆಯ ಸೊಬಗಿಗೆ ಅವರು ಮನಸುಗೊಡಲಿಲ್ಲ.

ಮುಂದೆ ಹಾಸನ ಜಿಲ್ಲೆಗೆ ಹೋದರು. ಅಲ್ಲಿ ಬೇಲೂರಿಗೆ ಹೋದರು. ಹೋದುದು ಬೇಲೂರಿನ ಶಿಲ್ಪಕಲಾ ಸೌಂದರ್ಯವನ್ನು ನೋಡಲಿಕ್ಕಲ್ಲ. ಜಕಣಾಚಾರಿ ಕಲ್ಲಿನೊಳಗೆ ಹರಿಸಿದ ಆನಂದಾಮೃತವನ್ನು ಸವಿಯಲಲ್ಲ, ಅಲ್ಲಿದ್ದ ಜನ ಅವರಿಗೆ ಚೆನ್ನಕೇಶವನ ದಿವ್ಯದೇವಾಲಯದ ಮೂಲೆ ಮೂಲೆಯನ್ನೂ ಸಂದಿ– ಗೊಂದಿಯನ್ನೂ ಹಿಗ್ಗಿನಿಂದ ಹೆಮ್ಮೆಯಿಂದ ತೋರಿಸುತ್ತಿದ್ದರು. ಗಾಂಧೀಜಿ ಎಲ್ಲ ವಿಗ್ರಹಗಳ ಮೇಲೂ ಕೆತ್ತನೆಯ ಮೇಲೂ ಕಣ್ಣಾಡಿಸಿದರು. ಅವರ ಮನಸು ಮಾತ್ರ ಅಲ್ಲಿರಲಿಲ್ಲ. ಆ ಸೊಬಗನ್ನು ದಂಗುಬಡಿದು ನೋಡುತ್ತಿದ್ದ ಸುತ್ತಲಿನ ಜನರನ್ನು ನೋಡಿ 'ದೇವರೆ, ಜನರ ಮಂದಬುದ್ಧಿಗೆ ಮದ್ದುಂಟೆ?' ಎಂದು ಒಳಗೊಳಗೆ ಅವರ ಎದೆ ಮಿಡುಕುತ್ತಿದ್ದಿರಬೇಕು. ಕಡೆಗೆ ಆ ಮಿಡುಕು ಹೊರಗೆ ಹರಿಯಿತು: 'ಭಾರತೀಯ ಶಿಲ್ಪಕಲೆಯ ಅದ್ಭುತ ಕೀರ್ತಿಧ್ವಜವಾದ ಈ ಗುಡಿಯ ಸೆಳೆತಕ್ಕೆ ಸಿಕ್ಕದವರು ಯಾರು? ದರಿದ್ರನಾರಾಯಣನ ಭಕ್ತನಾದ ನಾನು, ಇಂಥ ಕಣ್ಣಹಬ್ಬ ಸವಿಯುತ್ತಾ ಕಾಲ ಕಳೆಯಲು ಬಹುದೇ? ನನ್ನ ಬದುಕೆಲ್ಲ– ಗಳಿಗೆಗಳಿಗೆಯೂ– ಬಡವರ ಸೇವೆಗಾಗಿಯೇ ಮೀಸಲಾಗಿದೆ, ಮುಡಿಪಾಗಿದೆ. ಕೇಶವದಾಸರು 500 ರೂಪಾಯಿಯ ನಿಧಿ ಕೂಡಿಸಿ ಕೊಡುವ ಮಾತು ಕೊಟ್ಟರದಿದ್ದರೆ ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ.' ಭದ್ರಾವತಿಗೂ ಹೋಗಿದ್ದರು. ಅಲ್ಲಿಯ ಯಂತ್ರವೈಭವವನ್ನು ನೋಡಲಲ್ಲ, ಖಾದಿಯನ್ನು ತೊಡಿರೆಂದು ಅಲ್ಲಿಯ ಕೆಲಸಗಾರರಿಗೆ ಹೇಳಲಿಕ್ಕೆ.

ಇಂಥ ಪ್ರಸಂಗ ಗಾಂಧೀಜಿಯ ಬಾಳಿನಲ್ಲಿ ದಿನಾಲೂ ಕಂಡುಬರುತ್ತವೆ. ಅವರ ಜೀವನದಲ್ಲಿ ಸರಲತೆ ತಾನೇತಾನಾಗಿ ಹರಡಿಕೊಂಡಿದೆ. ಅಸ್ವಾಮ್ಯ– ಅಪರಿಗ್ರಹದ ತಾಪಸವ್ರತವನ್ನು ತೊಟ್ಟವರಿಗೆ, ಕಲೆಯ ಕ್ಷೇತ್ರ ಸಹಜವಾಗಿಯೇ ಹಿಗ್ಗುತ್ತದೆ. ಅಂಥ ಬಾಳಿನಲ್ಲಿ ಅಲಂಕಾರ ಪ್ರೀತಿಗೆ ಅವಕಾಶವಿಲ್ಲ; ಅಂದವಾದ ವಸ್ತುಗಳನ್ನು ಶೇಖರಿಸುವ ರುಚಿ ಇಲ್ಲ. ಆ ನಿಷ್ಠೆಗೆ ಲಕ್ಷ್ಯಶುದ್ಧಿಯಿದೆ; ಆ ಕಣ್ಣಿಗೆ ಗುರಿಯ ರೂಪ ಕಟ್ಟಿ ಉಳಿದುದು ಯಾವುದಕ್ಕೂ ಎಡೆಕೊಡದು. ಶ್ರೀರಾಮಚಂದ್ರನು ಒಮ್ಮೆ ತನ್ನ ಕೊರಲ ಸರವನ್ನು ತೆಗೆದು ಹನುಮಂತನಿಗೆ ಕೊಟ್ಟನಂತೆ ಅಭಿಮಾನದಿಂದ. ದಾನಕೊಟ್ಟ ದನದ ಹಲ್ಲು ಹಿಡಿದು ನೋಡಬಾರದೆಂಬ ವ್ಯವಹಾರಧರ್ಮವಿರಲಿ, ಕೊಟ್ಟವನ ಇದಿರಿಗೇ ನಿರ್ದಾಕ್ಷಿಣ್ಯದಿಂದ ಆ ಸರದ ಮುತ್ತನ್ನು ಒಡೆದು ನೋಡಲು ತೊಡಗುವುದೇ! ಒಂದೊಂದಾಗಿ ಅವನ್ನೆಲ್ಲ ಒಡೆದು ಪುಡಿಮಾಡಿದ ಹನುಮಂತ. ಸೀತಾದೇವಿಗೆ ಹನುಮಂತನ ಹುಡುಗಾಟ ಒಗ್ಗಲಿಲ್ಲ. ಭಕ್ತನನ್ನು ಬಿರುಗಣ್ಣಿನಿಂದ ನೋಡಿದಳು. ಹನುಮಂತ ನಯದಿಂದ ಹೇಳಿದ: 'ರಾಮನಾಮ, ಇದರಲ್ಲಿಲ್ಲ. ರಾಮನಾಮವಿಲ್ಲದ